

ಅಘನಾಶಿನಿ ನದಿ ಕಣಿವೆ



ಅಜ್ಞಾತ ಜಲಪಾತ

## ಇಂದು ನಿನ್ನೆಯದಲ್ಲ...

ಅಘನಾಶಿನಿ ಮತ್ತು ಬೇಡ್ತಿ ನದಿ ಕಣಿವೆಗೆ ಅಣೆಕಟ್ಟುಗಳ ಭಯ ಇಂದು ನಿನ್ನೆಯದಲ್ಲ. 1970ರ ದಶಕದಿಂದಲೇ ಶುರುವಾಗಿದ್ದು. ಜಲವಿದ್ಯುತ್, ಮಿನಿ ಹೈಡಲ್, ನದಿ ತಿರುವು... ಹೀಗೆ ಹಲವು ಹೆಸರುಗಳಲ್ಲಿ ಕಾಡುತ್ತಲೇ ಬಂದಿದೆ. ಸ್ವರ್ಣವಲ್ಲಿಯ ಈ ಹಿಂದಿನ ಸ್ವಾಮಿಗಳಾಗಿದ್ದ ಶ್ರೀ ಸರ್ವಜ್ಞೇಂದ್ರ ಸರಸ್ವತಿಗಳ ನೇತೃತ್ವದಲ್ಲಿ 1978ರಲ್ಲಿ ಸ್ಥಾಪಿತಗೊಂಡ 'ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ' ಇಂದಿನವರೆಗೂ ಜನಸಾಮಾನ್ಯರು, ಪರಿಸರಪ್ರೇಮಿಗಳು, ಪರಿಸರ ತಜ್ಞರನ್ನು ಒಳಗೊಳ್ಳುತ್ತ, ಎದುರಾದ ಹೊಸ ಹೊಸ ಯೋಜನೆಗಳ ಬಗ್ಗೆ ಜಾಗೃತಿ, ಶಾಂತಿಯುತ ಹೋರಾಟ ರೂಪಿಸಿ ಯೋಜನೆಗಳನ್ನು ತಡೆಯುತ್ತಲೇ ಬಂದಿದೆ. ಪ್ರಸ್ತುತ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು ಹಲವು ದಶಕಗಳಿಂದ ಹೋರಾಟದ ನೇತೃತ್ವ ವಹಿಸುತ್ತಿದ್ದಾರೆ.

## ಸಂಕಟದ ಹಿಂದೆ...

ಆರಂಭದಲ್ಲಿ ಮಿನಿ ಡ್ಯಾಂ, ಸಣ್ಣ ಯೋಜನೆ ಎಂದು ಸಿದ್ಧಗೊಳ್ಳುವ ಇಂತಹ ನದಿ ಅಣೆಕಟ್ಟು ಯೋಜನೆಗಳು ಕ್ರಮೇಣ ವಿಸ್ತಾರಗೊಳ್ಳುತ್ತ ಎತ್ತರವಾಗುತ್ತ ಮತ್ತೆ ಮತ್ತೆ ಹೊಸ ರೂಪ ಪಡೆಯುತ್ತ ಆಯಾ ನದಿ ಕಣಿವೆಯನ್ನೇ ಮುಳುಗಿಸಿದ ಉದಾಹರಣೆಯಾಗಿ ಕಾಳಿ ಮತ್ತು ಶರಾವತಿ ನದಿ ಯೋಜನೆಗಳು ಜಿಲ್ಲೆಯ ಜನರ ಕಣ್ಣ ಮುಂದಿವೆ.

ಉತ್ತರ ಕನ್ನಡ ಶೇಕಡ 79ಕ್ಕೂ ಹೆಚ್ಚು ಅರಣ್ಯ ಪ್ರದೇಶವನ್ನು ಹೊಂದಿರುವ ಜಿಲ್ಲೆ. ಶಿರಸಿ, ಸಿದ್ದಾಪುರ, ಯಲ್ಲಾಪುರ ತಾಲ್ಲೂಕುಗಳ ಮಲೆನಾಡು ಪ್ರದೇಶ, ಪಶ್ಚಿಮ ಘಟ್ಟ ಮತ್ತು ಘಟ್ಟದಂಚಿನ ಕರಾವಳಿ ಭಾಗದಲ್ಲಿ ಪಹಣಿ ಹೊಂದಿರುವ ಕಂದಾಯ ಭೂಮಿ ಬಹಳ ಕಡಿಮೆಯಿದ್ದು ಜನಸಮುದಾಯಗಳು ಅಲ್ಲಲ್ಲಿ ಅರಣ್ಯ ಅತಿಕ್ರಮಣ, ಸರ್ಕಾರಿ ಬೆಟ್ಟ, ಗೋಮಾಳ, ಬಗರ್‌ಹುಕುಂ ಸಾಗುವಳಿ ಮತ್ತು ವಸತಿ ಮಾಡಿಕೊಂಡು ಬದುಕುತ್ತಿದ್ದಾರೆ. ಅಣೆಕಟ್ಟು, ಜಲಾಶಯ, ಮುಳುಗಡೆ ಮತ್ತು ಇನ್ನಾವುದೇ ಯೋಜನೆಯ ವ್ಯಾಪ್ತಿಯಲ್ಲಿ ಸಿಲುಕಿಕೊಂಡರೆ ಅಂತಹ ಬಡ ಜನ ಸಮುದಾಯ ಕಳೆದುಕೊಳ್ಳುವ ನೆಲಕ್ಕೆ ಪರಿಹಾರ ಪಡೆಯುವ ಅನುಕೂಲವೂ ಇಲ್ಲದೆ ನಿರ್ಗತಿಕರಾಗುವ ಅಪಾಯವಿದೆ.

ಸೇರುವ ಬೇಡ್ತಿ ನದಿ ಸಹ ಆಯಾ ಮಲೆನಾಡು ಮತ್ತು ಕರಾವಳಿ ಪ್ರದೇಶದ ಜನರ ಜೀವನಾಡಿಯಾಗಿದೆ. ನದಿ ಕಣಿವೆಯಲ್ಲಿ ವಾಸಿಸುವ 1.5 ಲಕ್ಷ ಜನರಿಗೆ ರೈತರಿಗೆ ಬೇಸಿಗೆಯಲ್ಲಿ ಕೊರತೆಯಾಗುವ ನದಿಯ ನೀರನ್ನು ಬೇರೆಡೆ ತಲುಪಿಸುವ ಉದ್ದೇಶಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗುತ್ತಿದೆ.

ಕಾಳಿ ನದಿ, ಶರಾವತಿ ನದಿ ಅಣೆಕಟ್ಟು ಮತ್ತು ಜಲಾಶಯಗಳು, ಜಲವಿದ್ಯುತ್ ಯೋಜನೆಗಳು, ಕೈಗಾ ಅಣುಸ್ಥಾವರ, ಬಂದರು ಯೋಜನೆಗಳು, ರೈಲು ಮಾರ್ಗ, ಹೆದ್ದಾರಿ ನಿರ್ಮಾಣ, ಶರಾವತಿ ನದಿಗೆ ಮತ್ತೆ ಹೊಸದಾಗಿ ಪಂಪ್ಡ್ ಸ್ಟೋರೇಜ್ ಯೋಜನೆ ಮೊದಲಾದ ಪರಿಸರ ನಾಶದ ಯೋಜನೆಗಳಿಂದ ನಲುಗುತ್ತಿರುವ ವೈವಿಧ್ಯಮಯ ಮತ್ತು ಪರಿಸರ ಸೂಕ್ಷ್ಮ ಪ್ರದೇಶಗಳನ್ನೊಳಗೊಂಡ ಉತ್ತರ ಕನ್ನಡ ಜಿಲ್ಲೆಯ 'ಪರಿಸರ ವ್ಯವಸ್ಥೆ'ಗೆ ತೀವ್ರ ಧಕ್ಕೆ ತರಲಿದೆ ಎಂದು ಪರಿಸರ ತಜ್ಞರು ಅಭಿಪ್ರಾಯಪಡುತ್ತಾರೆ.

ಈ ಎಲ್ಲ ಹಿನ್ನೆಲೆಯಲ್ಲಿ ಹಲವು ದಶಕದಿಂದ ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳ ನೇತೃತ್ವದಲ್ಲಿ ಹೋರಾಟ ನಡೆಸುತ್ತಲೇ ಬಂದ 'ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ', 'ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಎಂಬ ಧ್ಯೇಯದೊಂದಿಗೆ ಮತ್ತೆ ಜಾಗೃತಿ ಸಭೆಗಳನ್ನು ನಡೆಸಿ ಹೋರಾಟಕ್ಕೆ ಮುಂದಾಗಿದೆ.

ಯಲ್ಲಾಪುರ, ಸಹಸ್ರಲಿಂಗ, ವಾನಳ್ಳಿ, ಹೆಗ್ಗರಣಿ ಮೊದಲಾದ ಕಡೆಗಳಲ್ಲಿ ಜಾಗೃತಿ ಸಮಾವೇಶಗಳು, ರ್‍ಯಾಲಿಗಳು ನಡೆದಿದ್ದು ಜಿಲ್ಲೆಯ ಹಲವು ತಾಲ್ಲೂಕುಗಳ ಜನರ ಕೂಡುವಿಕೆಯಲ್ಲಿ ಇನ್ನಷ್ಟು ದೊಡ್ಡ ಹೋರಾಟದ ತಯಾರಿಗಳು ನಡೆಯುತ್ತಿವೆ. ಜತೆಗೆ ಜಿಲ್ಲೆಯ ಯುವ ಸಮುದಾಯ ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುಂದಾಗುತ್ತಿದೆ, ಮಲೆನಾಡು, ಪಶ್ಚಿಮ ಘಟ್ಟ, ಕರಾವಳಿ ಮೊದಲಾದ ವೈವಿಧ್ಯಮಯ ಭೂ ಪ್ರದೇಶ ಮತ್ತು ಜನ ಸಮುದಾಯಗಳನ್ನೊಳಗೊಂಡ ಜಿಲ್ಲೆಯ ತಲ್ಲಣ ಆಕ್ರೋಶಗಳನ್ನು ನಾಡಿಗೆ ತಲುಪಿಸುವ ಪ್ರಯತ್ನದಲ್ಲಿ ತೊಡಗಿದೆ. ಸದಾ ಪರಿಸರ ರಕ್ಷಣೆಯ ಒಂದಿಲ್ಲೊಂದು ಹೋರಾಟದ ಅನಿವಾರ್ಯ ಒತ್ತಡಕ್ಕೆ ಒಳಗಾಗುತ್ತಲೇ ಬಂದ ಜಿಲ್ಲೆಯ ಜನ ಸುಸಜ್ಜಿತ ಆಸ್ಪತ್ರೆ ಸೌಕರ್ಯಗಳಿಲ್ಲದ ನಮ್ಮ ಜಿಲ್ಲೆಗೆ ಅಭಿವೃದ್ಧಿಯೇಕೆ ಹೀಗೆ ಎಂದು ಪ್ರಶ್ನಿಸುತ್ತಿದ್ದಾರೆ. ಜಿಲ್ಲೆಯ ಪರಿಸರ ಹೋರಾಟಗಾರರು, ವಿಜ್ಞಾನಿಗಳು, ಧಾರ್ಮಿಕ ನಾಯಕರು, ಜನಪ್ರತಿನಿಧಿಗಳು ಎಲ್ಲರೂ ವಿರೋಧಿಸುತ್ತಿರುವ ಈ ಯೋಜನೆಗಳು ಶಾಶ್ವತವಾಗಿ ನಿಲುಗಡೆಯಾಗಬಹುದೇ ಕಾದು ನೋಡಬೇಕಿದೆ.

ಜಾಗತೀಕರಣ, ವ್ಯಾಪಾರೀಕರಣದ ನದಿಯ ತೀವ್ರ ಸೆಳೆತದೊಳಗೆ ಕೊಚ್ಚಿ ಹೋಗುತ್ತಿರುವ, ಜಾಗತಿಕ ತಾಪಮಾನದ ಬಿಸಿಯೂ ಸುಡುತ್ತಿರುವ ಈ ಕಾಲದಲ್ಲಿ ನಮ್ಮ ಸಂರಕ್ಷಿತ ಅರಣ್ಯವನ್ನು, ಪರಿಸರ ಸೂಕ್ಷ್ಮ ಪ್ರದೇಶಗಳನ್ನು, ಸಹಜ ನೈಸರ್ಗಿಕ ವ್ಯವಸ್ಥೆಯನ್ನು ಹೇಗೆ ಉಳಿಸಿಕೊಳ್ಳುತ್ತೇವೆ ಎಂಬ ಸವಾಲಿನತ್ತ ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲ, ದೇಶವೇ ಹೊರಳಿ ನೋಡುವ ಅಗತ್ಯವಿದೆ.